# ಬಾಲೆಯರ ಧ್ವನಿ

ಪ್ರವೀಣ ಕುಲಕರ್ಣಿ



‘ಸ್ಟ್ಯಾಂಡ್ ಅಪ್’ ಎಂಬ ಹೊಸ ಹಾಡಿನೊಂದಿಗೆ ಬಂದಿರುವ ರ್‍ಯಾಪರ್ ಸೊನಿಟಾ ಅಲಿಝಾದೆ ಈಗ ಜಗದಗಲ ಮತ್ತೆ ಸುದ್ದಿಯಲ್ಲಿದ್ದಾರೆ. ಹುಡುಗಿಯರ ಹಕ್ಕುಗಳಿಗಾಗಿ ರ್‍ಯಾಪ್ ಮೂಲಕ ಧ್ವನಿ ಎತ್ತಿರುವ ಸೊನಿಟಾ ಅವರದು ಬಲು ಸಾಹಸದ ಬದುಕು. ಜೀವನದಲ್ಲಿ ಸೋತು ನಿಂತ ಪ್ರತಿಯೊಬ್ಬರಿಗೂ ಪ್ರೇರಣೆ ನೀಡಬಲ್ಲ ಕಥೆ ಅವರದು. ಅಫ್ಘಾನಿಸ್ತಾನದ ಹೆರಾತ್‌ನಲ್ಲಿ ಜನಿಸಿದ ಸೊನಿಟಾ, ಈ ಹಿಂದಿನ ತಾಲಿಬಾನ್ ಆಡಳಿತದಲ್ಲಿ ಅಪಾಯದ ದವಡೆಯಿಂದ ಪಾರಾಗಲು – ಸುರಿಯುತ್ತಿದ್ದ ಮಳೆ, ಮಂಜಿನ ನಡುವೆ ನೂರಾರು ಕಿಲೋಮೀಟರ್ ದೂರ ಕ್ರಮಿಸಿ, ಇರಾನ್‌ಗೆ ನುಸುಳಿ ಹೋದವರು. ಹೀಗಾಗಿ, ಅಧಿಕೃತವಾಗಿ ನಿರಾಶ್ರಿತೆ ಎಂದಾಗಲಿ, ವಲಸಿಗಳು ಎಂದಾಗಲಿ ದಾಖಲಾಗದೆ, ಟೆಹರಾನ್‌ನ ನಿರಾಶ್ರಿತರ ಬೀದಿಯಲ್ಲಿ ಬಾಲ್ಯವನ್ನು ಕಳೆದವರು. ಅಧಿಕೃತವಾದ ಯಾವ ದಾಖಲೆಗಳೂ ಇಲ್ಲದ ಕಾರಣದಿಂದ ಶಾಲೆಗೆ ಸೇರಲೂ ಸಾಧ್ಯವಾಗದೆ ಪರಿತಪಿಸಿದವರು. ಸರ್ಕಾರೇತರ ಸಂಸ್ಥೆಯೊಂದು ನಿರಾಶ್ರಿತರ ಶಿಬಿರದಲ್ಲಿ ತೆರೆದ ಅನಧಿಕೃತ ಶಾಲೆಯಲ್ಲಿ ಓದಲು, ಬರೆಯಲು ಕಲಿತವರು.

ಅಫ್ಘಾನಿಸ್ತಾನದಲ್ಲಿ ಹೆಣ್ಣುಮಕ್ಕಳನ್ನು ಮದುವೆಯ ಹೆಸರಿನಲ್ಲಿ ಮಾರಾಟ ಮಾಡುವುದೊಂದು ದೊಡ್ಡ ಪಿಡುಗು. ಈ ಪಿಡುಗಿನ ಬಿಸಿ ಅನುಭವಿಸಿದವರಲ್ಲಿ ಸೊನಿಟಾ ಕೂಡ ಒಬ್ಬರು. ಹತ್ತು ವರ್ಷದ ಎಳವೆಯಲ್ಲಿ ಸೊನಿಟಾ ಅವರ ಪಾಲಕರು, ಅವರನ್ನು ವ್ಯಕ್ತಿಯೊಬ್ಬನಿಗೆ ಮಾರಾಟ ಮಾಡಿದ್ದರು. ಆದರೆ, ಒಪ್ಪಂದ ಮುರಿದು ಬಿದ್ದಿದ್ದರಿಂದ ಈ ಪುಟ್ಟ ಬಾಲಕಿ, ಬಾಲ್ಯ ವಿವಾಹದ ಅಪಾಯದಿಂದ ಸ್ವಲ್ಪದರಲ್ಲೇ ಬಚಾವಾಗಿದ್ದರು. ಹದಿನಾರನೇ ವಯಸ್ಸಿನಲ್ಲಿ ಮಾರಾಟದ ಮತ್ತೊಂದು ವ್ಯವಹಾರ ಕುದುರುತ್ತಿದ್ದಾಗ (ಈ ಹುಡುಗಿ ವಧುವಾಗಲು 9000 ಡಾಲರ್, ಅಂದರೆ ₹ 7.50 ಲಕ್ಷ ಆಮಿಷ ಒಡ್ಡಲಾಗಿತ್ತು) ಸೊನಿಟಾ, ಪಾಲಕರಿಂದಲೇ ತಪ್ಪಿಸಿಕೊಂಡು ಓಡಿದರು. ತಮ್ಮ ಓರಗೆಯ ಹೆಣ್ಣುಮಕ್ಕಳು ಇದ್ದಕ್ಕಿದ್ದಂತೆ ಅದೃಶ್ಯವಾಗುವುದನ್ನು ಕಂಡು ಕಂಗೆಟ್ಟ ಅವರು, ‘ಡಾಟರ್ಸ್ ಫಾರ್ ಸೇಲ್’ (ಹೆಣ್ಣುಮಕ್ಕಳು ಮಾರಾಟಕ್ಕಿದ್ದಾರೆ) ಎಂಬ ಪದ್ಯ ಬರೆದರು. ಇರಾನಿನ ಫಿಲ್ಮ್‌ಮೇಕರ್ ಒಬ್ಬರ ಸಹಾಯದಿಂದ ಆ ಹಾಡಿನ ವಿಡಿಯೊ ಕೂಡ ರಿಲೀಸ್ ಆಯಿತು. ಆ ಹಾಡು ಜಗತ್ತಿನ ಮೂಲೆ ಮೂಲೆಯಲ್ಲಿ ಮಾರ್ದನಿಸಿತು. ಈ ಕಥೆಯನ್ನು ರೊಕ್ಸರಾ ಘೇಮ್ಮಾಘೇಮಿ ‘ಸೊನಿಟಾ’ ಎಂಬ ಡಾಕ್ಯುಮೆಂಟರಿಯಲ್ಲಿ ಕಟ್ಟಿಕೊಟ್ಟರು.

ವಿಶ್ವಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಅಫ್ಘಾನಿಸ್ತಾನದಲ್ಲಿ ಹದಿನೆಂಟು ವರ್ಷ ಪೂರ್ಣಗೊಳ್ಳುವ ಮುನ್ನವೇ ಮದುವೆಯಾಗುವ ಹುಡುಗಿಯರ ಪ್ರಮಾಣ ಶೇ. 40ರಷ್ಟಿದೆ. ಎದುರು–ಬದರು ಮಾಡಿಕೊಳ್ಳುವ (ಇವರ ಮನೆಯ ಹುಡುಗಿಯನ್ನು ಅವರ ಮನೆಗೆ, ಅವರ ಮನೆಯ ಹುಡುಗಿಯನ್ನು ಇವರ ಮನೆಗೆ ತಂದುಕೊಳ್ಳುವುದು) ಪರಿಪಾಟ ಕೂಡ ಈ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿದೆ. ಈ ಪಿಡುಗಿನ ವಿರುದ್ಧ ಸೊನಿಟಾ ಧ್ವನಿ ಎತ್ತಿ, ತನ್ನಂತಹ ಹೆಣ್ಣು ಮಕ್ಕಳನ್ನು ಬಾಲ್ಯ ವಿವಾಹದ ದವಡೆಯಿಂದ ಪಾರುಮಾಡಲು ಯತ್ನಿಸುತ್ತಿದ್ದಾರೆ. ಮಾನವ ಹಕ್ಕುಗಳ ಪರವಾಗಿ ಧ್ವನಿಯನ್ನೂ ಎತ್ತಿದ್ದಾರೆ.

ಹೆಣ್ಣುಮಕ್ಕಳ ಮಾರಾಟದ ಕುರಿತು ಸೊನಿಟಾ ಅವರಲ್ಲಿ ಆಕ್ರೋಶ ತುಂಬಿದೆ. ‘ಕುರಿಗಳಂತೆ ನಮಗೇನು ದರದ ಟ್ಯಾಗ್ ಇಲ್ಲ. ನಾವೂ ಶಾಲೆಗೆ ಹೋಗಬೇಕು. ಪುಸ್ತಕ ಓದಬೇಕು. ನಮ್ಮ ದಾರಿಯನ್ನು ನಾವು ಕಂಡುಕೊಳ್ಳಬೇಕು’ ಎಂದು ಅವರು ಹೇಳುತ್ತಾರೆ. ‘ನನ್ನ ತಾಯಿ ಎಷ್ಟು ಚಿಕ್ಕ ವಯಸ್ಸಿನಲ್ಲಿ ಮದುವೆ ಆಗಿದ್ದಾಳೆ ಗೊತ್ತೆ? ನನ್ನ ತಂದೆಗೆ ಅವಳು ಚಿಕ್ಕಪ್ಪ ಎಂದು ಕರೆಯುತ್ತಿದ್ದಳು. ಇದು ನನ್ನ ದೇಶದ ಹೆಣ್ಣುಮಕ್ಕಳ ಸ್ಥಿತಿ’ ಎಂದು ನೋವಿನಿಂದ ವಿವರಿಸುತ್ತಾರೆ. ಸೊನಿಟಾ ಅವರ ಅಮ್ಮನ ಮದುವೆಯಾಗಿ ದಶಕಗಳೇ ಉರುಳಿವೆ. ಸರ್ಕಾರಗಳು ಹೋಗಿ ಸರ್ಕಾರಗಳು ಬಂದಿವೆ. ಅಫ್ಘಾನಿಸ್ತಾನದ ಸಾಮಾಜಿಕ ಪರಿಸ್ಥಿತಿಯಲ್ಲಿ ಮಾತ್ರ ಹೆಚ್ಚಿನ ಬದಲಾವಣೆ ಆಗಿಲ್ಲ.

ಮಹಿಳೆಯರು ಹಾಡು ಹಾಡುವುದೆಂದರೆ ಇರಾನ್‌ನಲ್ಲಿ ಅದೊಂದು ಅಕ್ರಮ ಚಟುವಟಿಕೆ. ಸೊನಿಟಾ, ಅಲ್ಲಿದ್ದ ಅವಧಿಯಲ್ಲಿ ಹಾಡುಗಳ ಮೇಲೆ ಹಾಡುಗಳನ್ನು ಬರೆದರು. ರ್‍ಯಾಪ್ ಮತ್ತು ಸಂಗೀತದಲ್ಲೂ ಆಸಕ್ತಿ ಹೆಚ್ಚಿಸಿಕೊಂಡರು. ‘ಡಾಟರ್ಸ್ ಫಾರ್ ಸೇಲ್’ ಹಾಡು ಎಂತಹ ಮೋಡಿ ಮಾಡಿತೆಂದರೆ ಅಮೆರಿಕದಿಂದ ಅವರಿಗೆ ಶಿಷ್ಯವೇತನ ಸಿಕ್ಕು, ಅಲ್ಲಿಯೇ ಓದಲು, ಸಾಮಾಜಿಕ ಆಂದೋಲನಗಳಲ್ಲಿ ಪಾಲ್ಗೊಳ್ಳಲು ಅವಕಾಶವೂ ಸಿಕ್ಕಿತು. ಸೊನಿಟಾ, ಪಟ್ಟು ಬಿಡದೆ ಬಾಲ್ಯ ವಿವಾಹದ ವಿರುದ್ಧ ಜಾಗೃತಿ ಮೂಡಿಸುವ ಕೆಲಸವನ್ನು ಮುಂದುವರಿಸಿದ್ದಾರೆ. ‘ಬಿಬಿಸಿ’ಯು 2015ರಲ್ಲಿ ಜಗತ್ತಿನ ನೂರು ಪ್ರಭಾವಿ ಮಹಿಳೆಯರಲ್ಲಿ ಇವರನ್ನೂ ಒಬ್ಬರನ್ನಾಗಿ ಗುರ್ತಿಸಿತು. ಇಪ್ಪತ್ತಕ್ಕೂ ಅಧಿಕ ದೇಶಗಳು ಇವರ ಮೇಲೆ ಪ್ರಶಸ್ತಿ, ಪುರಸ್ಕಾರಗಳನ್ನು ಸುರಿಸಿ, ಪುಳಕಗೊಂಡವು. ಆ ಪ್ರಶಸ್ತಿಗಳಿಂದ ಪುಳಕಗೊಳ್ಳದ ಸೊನಿಟಾ ಮಾತ್ರ ತಮ್ಮ ಕಾಯಕವನ್ನು ಮುಂದುವರಿಸಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65